2) ವಿಷಯ: ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯ ಕೆಲವು ಕುಂದುಕೊರತೆಗಳ ಬಗ್ಗೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ (ವಿಮಾ) ಯೋಜನೆಯ ಕೆಲವು ಕುಂದುಕೊರತೆಗಳ ಬಗ್ಗೆ ಮಾನ್ಯ ಕಾರ್ಮಿಕ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ:– ಮಾನ್ಯ ಶಿವಲಿಂಗೇಗೌಡರವರು, ಇವತ್ತು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಅದು ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ. ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯಡಿಯಲ್ಲಿ ಆಸ್ಪತ್ರೆಗಳ ಆಯ್ಕೆ ಮತ್ತು ವಿವಿಧ ಖಾಯಿಲೆಗಳಿಗೆ ಚಿಕಿತ್ಸೆಯ ವೆಚ್ಚವನ್ನು ನಿಗದಿ ಮಾಡುವಾಗ ಆಗಿರುವ ಗೊಂದಲದ ಬಗ್ಗೆ ಎನ್ನತಕ್ಕಂಥ ವಿಚಾರದ ಬಗ್ಗೆ ಗಮನ ಸೆಳೆದಿದ್ದಾರೆ. ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯು ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಆದರೆ, ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ ಕೇಂದ್ರಸರ್ಕಾರದ ಮಾರ್ಗಸೂಚಿಯನ್ವಯ ಅನುಷ್ಠಾನಗೊಳ್ಳುತ್ತದೆ.

(ಗೊಂದಲ)

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ:– ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ ಎಂದೆ.

ಅಧ್ಯಕ್ಷರು:– ಆಯಿತು, ಎಂಥದ್ದೋ, ಸ್ವಾಸ್ಥ, ಸ್ವಸ್ಥವೋ ತೆಗೆದುಕೊಳ್ಳಿ.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಕಾರ್ಮಿಕ ಸಚಿವರು):– ಮಾನ್ಯ ಅಧ್ಯಕ್ಷರೆ,

ಕಾರ್ಮಿಕ ಇಲಾಖೆಯಡಿ ಭೀಮಾ ವಿಮಾ ಯೋಜನೆಯು ಇರುವುದಿಲ್ಲ. ಆದರೆ, ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ಜಂಟಿಯಾಗಿ ಅನುಷ್ಠಾನಗೊಳಿಸುತ್ತದೆ. ಈ ಯೋಜನೆಯನ್ನು ಜಾರಿಗೆ ತರಲು ಆಯ್ಕೆ

ಮಾಡಲಾದ ವಿಮಾ ಕಂಪನಿಗಳು ಜಾರಿಗೆ ತರುತ್ತವೆ. ಪ್ರಸ್ತುತ ಈ ಯೋಜನೆಯಡಿಯಲ್ಲಿ ಅರ್ಹ ಕುಟುಂಬಗಳಿಗೆ ಸ್ಮಾರ್ಟ್ ಕಾರ್ಡ್ ವಿತರಿಸುವ ಕಾರ್ಯ ಮತ್ತು ಆಸ್ಪತ್ರೆಗಳ ಆಯ್ಕೆ ಹಾಗೂ ಆಸ್ಪತ್ರೆಗಳ ಕ್ಲೇಮ್ ಮೊತ್ತವನ್ನು ಪಾವತಿಸುವುದು ಆಯ್ಕೆ ಮಾಡಲಾದ ವಿಮಾ ಕಂಪನಿಗಳ ಜವಾಬ್ದಾರಿಯಾಗಿರುತ್ತದೆ.

ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯಡಿ ಆಯ್ಕೆ ಮಾಡಲಾದ ವಿಮಾ ಸಂಸ್ಥೆಯವರು ಮತ್ತು ಅವರ ಸಹಭಾಗಿತ್ವದ ಟಿಪಿಎ (Third Party Administration) ಸಂಸ್ಥೆಯವರು ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳನ್ನು ನೊಂದಾಯಿಸುವರು ಹಾಗೂ ಈ ಯೋಜನೆಯಡಿ 1,516 ಚಿಕಿತ್ಸಾ ಕ್ರಮಗಳಿಗೆ ಕೇಂದ್ರ ಸರ್ಕಾರದ ಮಟ್ಟದಲ್ಲಿ ವೆಚ್ಚವನ್ನು ನಿಗಧಿಪಡಿಸಲಾಗಿದೆ. ಈ ಚಿಕಿತ್ಸಾ ಕ್ರಮಗಳಿಗೆ ಮತ್ತು ವೆಚ್ಚಗಳಿಗೆ ವಿಮಾ ಸಂಸ್ಥೆಯವರು ಬದ್ಧವಾಗಿರುವಂತೆ ಒಡಂಬಡಿಕೆ/ಒಪ್ಪಂದ ಕೈಗೊಳ್ಳಲಾಗಿದೆ. ಈ ವಿಷಯಗಳಲ್ಲಿ ಯಾವುದೇ ಗೊಂದಲ ಇರುವುದಿಲ್ಲ.

ಯಾವುದೇ ರೀತಿಯ ಕುಂದುಕೊರತೆಗಳು ಉದ್ಭವಿಸಿದಲ್ಲಿ ಅವುಗಳನ್ನು ಪರಿಹರಿಸಲು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಕುಂದುಕೊರತೆ ನಿವಾರಣಾ ಸಮಿತಿಗಳನ್ನು ರಚಿಸಲಾಗಿದೆ. ಕ್ಷೇತ್ರ ಮಟ್ಟದಲ್ಲಿ ಉದ್ಭವಿಸುವ ಕುಂದುಕೊರತೆಗಳನ್ನು ನಿಯಮಾನುಸಾರ ಜಿಲ್ಲಾಮಟ್ಟದ ಕುಂದುಕೊರತೆ ಸಮಿತಿಗಳಲ್ಲಿ ಇತ್ಯರ್ಥಗೊಳಿಸುವಂತೆ, ತಪ್ಪಿದ್ದಲ್ಲಿ ಸದರಿ ದೂರು/ಕುಂದುಕೊರತೆಗಳನ್ನು ರಾಜ್ಯ ಮಟ್ಟದ ಕುಂದುಕೊರತೆ ನಿವಾರಣಾ ಸಮಿತಿಯ ಮೇಲ್ವಿಚಾರಣೆಗೆ ಸಲ್ಲಿಸಿದಲ್ಲಿ ಇತ್ಯರ್ಥಗೊಳಿಸಲಾಗುವುದು.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ಸ್ವಾಸ್ಥ್ಯ ಭೀಮಾ ಯೋಜನೆ ಸಂಬಂಧ ಮಾನ್ಯ ಮಂತ್ರಿಯವರು ಅಲ್ಲಿಗೆ ಬಂದಿರಿ, ನಮ್ಮ ಹತ್ತಿರ ಭಾಷಣ ಮಾಡಿಸಿದಿರಿ. ಒಂದು ಕುಟುಂಬಕ್ಕೆ 30 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂತಲೂ ಹೇಳಿದರು. ಇವತ್ತು ನಮ್ಮ ಕ್ಷೇತ್ರದಲ್ಲಿ BPL card holders 1 ಲಕ್ಷ ಕುಟುಂಬಗಳಿವೆ. ಅವರಿಗೆಲ್ಲ ಕೊಡಿಸುತ್ತೇವೆಂದು card, photo

ಹೊಡೆಸುತ್ತಿದ್ದೀರಿ. ಅರಸೀಕೆರೆ ತಾಲ್ಲೂಕಿನಲ್ಲಿ ಏಕಕಾಲಕ್ಕೆ ಅಷ್ಟೂ ಜನ patients, ಯಾರೋ 500 ಜನ ಬಂದರೆ, ಯಾರನ್ನು admit ಮಾಡಿಕೊಳ್ಳುತ್ತಾರೆ? ನೀವು ಕೊಟ್ಟಿರುವ 3 ಆಸ್ಪತ್ರೆಗಳಲ್ಲಿ 15–15 ಬೆಡ್‌ಗಳಿವೆ. ಬಾಕಿ patients ಎಲ್ಲಿಗೆ ಹೋಗುತ್ತಾರೆ? ಇದೊಂದು ಸಮಸ್ಯೆ. ಎರಡನೆ ಸಮಸ್ಯೆ ಏನೆಂದರೆ, ನೀವು ದರವನ್ನು ನಿಗದಿ ಮಾಡುತ್ತೀರಲ್ಲ, ಯಾವ್ಯಾವ ಕಾಯಿಲೆಗೆ ಎಷ್ಟೆಷ್ಟು ಎಂದು ನಿಗದಿ ಮಾಡುತ್ತೀರೋ, ಅದರ ಪಟ್ಟಿ ಎಲ್ಲಿದೆ? ಅವರು 30 ಸಾವಿರ ರೂಪಾಯಿಗಳನ್ನು ಒಂದೇ ಕಾಯಿಲೆಗೆ ಮುರಿದುಕೊಂಡು ಕಳುಹಿಸಿದರೆ...

ಅಧ್ಯಕ್ಷರು:– ಗೌಡ್ರೆ, ನೀವು ಈಗ ಏನು ಪ್ರಸ್ತಾಪಿಸುತ್ತಿದ್ದೀರಿ, ಇದರ ಬಗ್ಗೆ ವಿಸ್ತಾರವಾಗಿ ಹೇಳಬೇಕಾಗುತ್ತದೆ. ಬೇರೆ ರೂಪದಲ್ಲಿ ಚರ್ಚೆ ಮಾಡಿ ಅಥವಾ half an hour ನಲ್ಲಿ ಚರ್ಚೆಗೆ ತೆಗೆದುಕೊಂಡು ಚರ್ಚೆ ಮಾಡಿ. ಆವಾಗ ಎಲ್ಲವನ್ನೂ ಹೇಳುವುದಕ್ಕೆ ಬರುತ್ತದೆ, ಆಗುತ್ತದೆ. ಈ calling attention motion ನಲ್ಲಿ ಅದೆಲ್ಲವನ್ನು ಎಲ್ಲಿ ಹೇಳುವುದಕ್ಕೆ ಆಗುತ್ತದೆ?

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಆಯಿತು, ಬೇರೆ ರೂಪದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು:– ಕೊಡೋಣ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಏಕೆಂದರೆ ಪುಕ್ಕಟೆ ಎಂದು ಜನ ನುಗ್ಗುತ್ತಿದ್ದಾರೆ. ಇವರಿಗೆ rules ಇಲ್ಲ, regulations ಇಲ್ಲ.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ:– ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ಹಾಗೆ ಮಾನ್ಯ ಸದಸ್ಯರು ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಲಿ. ಅದರ ಬಗ್ಗೆ ನಾನು ಸಂಪೂರ್ಣವಾದ ವಿವರಣೆ ನೀಡುತ್ತೇನೆ.

ಅಧ್ಯಕ್ಷರು:– O.K.